International Journal of Academic Research
ISSN: 2348-7666; Vol.5, Issue-11, November, 2018
Impact Factor: 6.023; Email: drtvramana@yahoo.co.in

# ಕುಣಿಗಲ್ ಕೆರೆಯ ಜನಪದೀಯ ನೆಲೆಗಳು

ಡಾ. ಲಕ್ಷ್ಮಿನರಸಮ್ಮ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್–572130.

## ಪೀಠಿಕೆ:

"ಮೂಡಲ್ ಕುಣಿಗಲ್ ಕೆರೆ
ನೋಡೋರಿಗೊಂದ್ಯೆಭೋಗ
ಮೂಡಿ ಬರ್ತಾನೆ ಚಂದಿರಾಮ
ತಾನಂದನೋ ಮೂಡಿ ಬರ್ತಾನೆ ಚಂದಿರಾಮ"– ಎಂಬ

ಜನಪದ ಗೀತೆಯು ಜನಪದ ಲೋಕದಲ್ಲಿ ಹಾಗೂ ಕರ್ನಾಟಕದಲ್ಲಿ ಜನಮಾನಸದಲ್ಲಿ ಅಚ್ಚಳಿಯದೆ ನಿಂತಿದೆ. ಕಂಚಿನ ಕಂಠ ಎಂದೇ ಖ್ಯಾತರಾಗಿದ್ದ ಪಿ.ಕಾಳಿಂಗರಾವ್ ಕೆರೆಗೆ ಸಂಬಂಧಿಸಿದ ಕುಣಿಗಲ್ ಕೆರೆ ಹಾಡನ್ನು ಅತ್ಯಂತ ಅದ್ಭುತವಾಗಿ ಹಾಡಿದ್ದು ಇಂದಿಗೂ ಜನರ ನಾಲಿಗೆಯ ಮೇಲೆ ಹರಿದಾಡುತ್ತಿದೆ. ೧೫ ಮೈಲಿ ಸುತ್ತಳತೆ ಹೊಂದಿರುವ ಕುಣಿಗಲ್ ಕೆರೆ ಹೇಮಾವತಿ ಜಲಾಶಯದಿಂದ ನೀರನ್ನು ಶೇಖರಣೆಯಾಗಿಸಿಕೊಂಡಿದೆ. ಕೆರೆಯ ಏರಿಯ ಮೇಲೆ ಪ್ರಾಚೀನ ಸೋಮೇಶ್ವರ ದೇವಾಲಯ ಸ್ಥಾಪಿತವಾಗಿದ್ದು ಹೊಯ್ಸಳರ ಕಾಲಕ್ಕೆ ಸೇರಿದ ದೇವಾಲಯವಾಗಿದೆ. ರಾಷ್ಟ್ರೀಯ ಹೆದ್ದಾರಿ ೪೮ ಎಂಬುದು ಕುಣಿಗಲ್ ತಾಲ್ಲೂಕಿನ ' ಮೇಲೆ ಹಾದು ಹೋಗುವುದರಿಂದ ಕುಣಿಗಲ್ಲಿನ ಮಹತ್ವ ಇನ್ನಷ್ಟು ಅಧಿಕವಾಗಿದೆ ಕುಣಿಗಲ್ಲಿನ ಜನರು ಕವಿರಾಜಮಾರ್ಗಕಾರನು ಹೇಳಿದಂತೆ.

"ಸುಭಟರ್ಕಳ್ ಕವಿಗಳ್ ಸುಪ್ರಭುಗಳ್
ಚೆಲ್ವರ್ಕಳ್ಭಿಜನರ್ಕಳ್ ಗುಣಿಗಲ್
ಅಭಿಮಾನಿಗಳತ್ಯುಗ್ರರ್ ಗಂಭೀರಚು ತ್ತರ್
ವಿವೇಕಿಗಳ್ ನಾಡವರ್ಗಳ್"

ಎಂಬಂತೆ ಸಾಹಸಿಗಳಾಗಿರುವುದರಲ್ಲಿ ಎರಡು ಮಾತಿಲ್ಲ. ಕುಣಿಗಲ್ ತಾಲೂಕಿನ ಪರಂಪರೆಗೆ ಸಂಬಂಧಿಸಿದಂತೆ ಹುಲಿಯೂರುದುರ್ಗದ ಹೇಮಗಿರಿ, ಹೊಡಾಘಟ್ಟ ಗ್ರಾಮದಲ್ಲಿ ಸಳನು ಹುಲಿಯನ್ನು ಕೊಲ್ಲುತ್ತಿರುವ ಹೊಯ್ಸಳರ ಶಾಸನವಿ ದೆ. ಗಂಗರ ಕಾಲಕ್ಕೆ ಗಂಗವಾಡಿಗೆ ಸೇರಿರುವ ೯೬೦೦೦ ಒಳ ಪ್ರದೇಶಗಳಲ್ಲಿರುವ ಕುಣಿಗಲ್ಲನ್ನು ಗಂಗರ ದೊರೆ ಶ್ರೀ ಪುರುಷನು ಕ್ರಿ.ಶ. ೮ನೇ ಶತಮಾನದ ಕೊನೆಯಲ್ಲಿ ಆಳುತ್ತಿದ್ದು ಕುಣಿಗಲ್ಲಿನಲ್ಲಿ ದೊಡ್ಡದಾದ ಕೆರೆಯನ್ನು ನಿರ್ಮಿಸಿದ್ದನೆಂದು ಶಾಸನವೊಂದು ಉಲ್ಲೇಖಿಸುತ್ತದೆ. ಚಾಲುಕ್ಯರ ನಂತರ ಮಾಂಧಾತಾ ಎಂಬ ರಾಜನು ಕುಣಿಗಲ್ಲನ್ನು ಆಳುತ್ತಿದ್ದನು. ಒಡೆದು ಹೋಗಿದ್ದ ದೊಡ್ಡ ಕೆರೆಯನ್ನು ಮಂಧಾತ ರಾಜನು ಕ್ರಿ.ಶ. ೯೬೩ರ ಆಸುಪಾಸಿನಲ್ಲಿ ದುರಸ್ತಿ ಮಾಡಿಸಿದ್ದಾನೆಂಬ ಮಾಹಿತಿಯೂ ಲಭ್ಯವಾಗಿದೆ. ನರ ತರದಲ್ಲಿ ಬಂದ ರಾಷ್ಟ್ರಕೂಟರ ಕುಂಭರಾಯ ಕುಣಿಗಲ್ಲಿನಲ್ಲಿ ಕ್ರಿ.ಶ. ೯೮೯ರಲ್ಲಿ ಒಂದು

ಕೋಟೆಯನ್ನು ಕಟ್ಟಿಸುತ್ತಾನೆಂದು ಹಾಗೂ ಕುಣಿಗಲ್ಲಿನಲ್ಲಿ ಚೋಳರು ಆಳ್ವಿಕೆ ನಡೆಸಿದ್ದಕ್ಕೆ 'ರಾಜೇಂದ್ರ ಚೋಳಪುರಂ' ಎಂಬಂತೆ ಕುಣಿಗಲ್ ಅನ್ನು ಹೆಸರಿರುವದನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ನರ ತರದಲ್ಲಿ ಹೊಯ್ಸಳರ ಆಳ್ವಿಕರೆ ಯಲ್ಲಿ ಕುಣಿಗಲ್ ಕೆರೆ ಬಹಳಷ್ಟು ಅಭಿವೃದ್ಧಿಯಾಗಿ ಜನಪ್ರಿಯವಾಯಿತು.

ನಂತರದಲ್ಲಿ ವಿಜಯನಗರ ಸಾಮ್ರಾಜ್ಯದ ಅರಸುಗಳು ಕುಣಿಗಲ್ಲನ್ನು ಆಳಿರುವ ಇತಿಹಾಸವನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ಬುಕ್ಕರಾಯನು ಕ್ರಿ.ಶ. ೧೧೬೯ರಲ್ಲಿ ಕುಣಿಗಲ್ ದೊಡ್ಡ ಕೆರೆಗೆ ಒಂದು ತೂಬನ್ನು ಮಾಡಿಸಿದ್ದಾನೆ. ಹುತ್ರಿದುರ್ಗದ ಬುಕ್ಕಾ ಸಾಗರದ ಗ್ರಾಮವನ್ನು ಅಕ್ಕಬುಕ್ಕರು ಆಳ್ವಿಕೆ ಮಾಡಿದ್ದಾರೆಂದು ಶಾಸನವೊಂದು ತಿಳಿಯಪಡಿಸುತ್ತದೆ. ವಿಜಯನಗರದ ಸಾಮಂತ ದೊರೆಯಾಗಿದ್ದ ತಮ್ಮೇಗೌಡ, ಇಮ್ಮಡಿ ಕೆಂಪೇಗೌಡ, ಮುಮ್ಮಡಿ ಕೆಂಪೇಗೌಡ ಈ ತಾಲೂಕನ್ನು ಆಳಿರುವುದು ಗಮನಾರ್ಹ. ಕೆಂಪೇಗೌಡ ಕ್ರಿ.ಶ. ೧೫೮೦ರ ಸುಮಾರನಲ್ಲಿ ಹುಲಿಯೂರಿನಲ್ಲಿ ದುರ್ಗವನ್ನು ಕಟ್ಟಿದ್ದರಿಂದಲೇ ಇಂದಿಗೂ ಕೂಡ ಹುಲಿಯೂರುದುರ್ಗ ಜನಪ್ರಿಯವಾದ ಪ್ರೇಕ್ಷಣೀಯ ಸ್ಥಳವಾಗಲು ಸಾಧ್ಯವಾಯಿತು. ಈತನೇ ಹುತ್ರಿದುರ್ಗದಲ್ಲೂ ಸಹ ಕೋಟೆಯನ್ನು ನಿರ್ಮಿಸಿದ್ದನೆಂದು ಪ್ರತೀತಿ ಇದೆ. ಕುಣಿಗಲ್ಲಿನಲ್ಲಿ ಹೈದರಾಲಿಯು ಮೈಸೂರು ಸೇನಗೆ ೆ ಸೇರ್ಪಡೆಯಾಗಿದ್ದ ಅರಬ್ಬಿ ಯುದ್ಧಾಶ್ವಗಳ ಸಾಕಾಣಿಕೆ ಹಾಗೂ ವರ್ಧನೆಗಾಗಿ "ಅಶ್ವವರ್ಧನ ಶಾಲೆ" (ಸ್ಟಡ್ ಫಾರ್ಮ್)ಯನ್ನು ಸ್ಥಾಪಿಸಿರುವುದು ಕುಣಿಗಲ್ಲಿನ ಹಿರಿಮೆಯನ್ನು ಎತ್ತಿ ಹಿಡಿಯುತ್ತದೆ. ಕುಣಿಗಲ್ಲಿನಲ್ಲಿ ಕಸಬಾ, ಕೊತ್ತಗೆರೆ, ಹುತ್ರಿದುರ್ಗ, ಹುಲಿಯೂರುದುರ್ಗ, ಅಮೃತೂರು, ಯಡಿಯೂರು ಎಂಬ ಹೋಬಳಿಗಳು ಪ್ರಮುಖ ಸ್ಥಳಗಳಾಗಿವೆ. ಕುಣಿಗಲ್ ಪಟ್ಟಣದಲ್ಲಿ ಕೊಲ್ಲಾಪುರದಮ್ಮ, ದುರ್ಗಮ್ಮ ದೇವಾಲಯ, ಹುತ್ರಿದುರ್ಗ ಬೆಟ್ಟದ ರಂಗನಾಥ ದೇವಸ್ಥಾನ, ಸಲ್ಲಾಪುರದಮ್ಮ ದೇವಸ್ಥಾನ, ಹುತ್ರಿದುರ್ಗ ಬೆಟ್ಟದಲ್ಲಿನ ಪಾತಾಳ ಗಂಗೆ, ಗವಿಗಂಗಾಧೀಶ್ವರ ದೇವಾಲಯಗಳು ಕುಣಿಗಲ್ಲಿನ ಸರ ಸ್ಕೃತಿಗೆ ಕನ್ನಡಿ ಹಿಡಿದಂತಿವೆ. ಇಂದು ಸ್ಟಡ್ ಫಾರಂ ೪೦೦ ಎಕರೆ ಜಾಗವನ್ನು ಉಳಿಸಿಕೊಂಡು ಸೈನ್ಯದ ಕುದುರೆಗಳಿಗೆ ಬದಲಾಗಿ ರೇಸ್ ಕುದುರೆಗಳನ್ನು ಸಾಕುತ್ತಿರುವುದು ಗಮನೀಯ. ಇತ್ತೀಚಿಗೆ ಯುನೈಟೆಡ್ ರೇಸ್‌ನ ವರ್ಲ್ಡ್ ಬ್ರೀಡರ್ಸ್ ಸಂಸ್ಥೆ ಕುಣಿಗಲ್ ಸ್ಟಡ್ ಫಾರ್ಮ್‌ನ್ನು ಲೀಸಿಗೆ ತೆಗೆದುಕೊಂಡು ರೇಸ್ ಕುದುರೆಗಳನ್ನು ಅಭಿವೃದ್ಧಿ ಪಡಿಸುತ್ತಿದೆ. ಕುಣಿಗಲ್ಲಿನಲ್ಲಿ ಸಂಗೀತ, ನೃತ್ಯ, ಚಂಡೆ ಮೇಳ, ಬುಡಬುಡಿಕೆ, ಶಕುನ ಮೊದಲಾದ ಕಲ ೆಗಳು ಪ್ರಖ್ಯಾತಿಯಾಗಿವೆ. ಇಂತಹ ಜನಪದೀಯ ನಲೆ ಗೆಳಿಂದ ಕುಣಿಗಲ್ ಕಂಗೊಳಿಸುತ್ತಿದ್ದರೂ ಈ ಊರಿನ ಮೆರಗನ್ನು ಕುಣಿಗಲ್ ಕೆರೆ ಇನ್ನಷ್ಟು ಹೆಚ್ಚಿಸಿದೆ. ಜನಪದರು ಅಂದು ಕಟ್ಟಿದ ಕುಣಿಗಲ್ ಕರೆ ೆಯ ಹಾಡು ಜನಮನದಲ್ಲಿ ಇಂದಿಗೂ ಕುಣಿದಾಡುತ್ತಿದ: ಕುಣಿಗಲ್ ಊರಿನ ಹಳ್ಳಿ ಜನರ ಬದುಕಿಗೆ ಈ ಕೆರೆ ಸ್ಫೂರ್ತಿದಾಯಕವ ಾಗಿದೆ.

ಮೂಡಲ್ ಕುಣಿಗಲ್ ಕೆರೆ ಜನಪದ ಗೀತೆ ಹಾಡುವುದೆಂದರೆ ಕಿವಿ ನಿಮಿರುವುದು. ಜನಪದರ ಬಾಯಿಂದ ಬಾಯಿಗೆ ಹಾಡುವ ಮೂಲಕ ಸಾಮೂಹಿಕವಾಗಿ ಸಾಗಿ

International Journal of Academic Research
ISSN: 2348-7666; Vol.5, Issue-11, November, 2018
Impact Factor: 6.023; Email: drtvramana@yahoo.co.in

ಬಂದ ಗೀತೆಗಳು ಬಹಳ ಸುಮಧುರತೆಯಿಂದ ಕೂಡಿವೆ. ಜನಪದ ಗೀತೆಗಳನ್ನು ಯಾರು ಬೇಕಾದರೂ ನಿರ್ಭಯವಾಗಿ ಹಾಡಬಹುದಾದ ಗೀತೆಗಳಾಗಿವೆ. ಇಂತಹ ಗೀತೆಗಳಲ್ಲಿ ಮೂಡಲ್ ಕುಣಿಗಲ್ ಕೆರೆ ಅತ್ಯಂತ ಜನಮನ್ನಣೆಯನ್ನು ಗಳಿಸಿದೆ ಎಂದರೆ ಎರಡು ಮಾತಿಲ್ಲ. ಪೂರ್ವ ದಿಕ್ಕಿನಲ್ಲಿರುವ ಕುಣಿಗಲ್ ಕರೆ ೆ ನೋಡುವವರಿಗೆ ಬಹಳ ಸುಖ ಸಂತೋಷವನ್ನು ನೀಡುತ್ತದೆ. ಆಕಾಶದಲ್ಲಿನ ‍ ಚರದ್ರನು ಕೆರೆಯಲ್ಲಿ ಹುಟ್ಟಿದ್ದಾನೆ ಎಂಬಂತೆ ಕುಣಿಗಲ್ ಕೆರೆಯಲ್ಲಿ ಚಂದ್ರನ ಬಿಂಬವನ್ನು ಕಂಡಾಗ ಅನಿಸುತ್ತದೆ. ಜನಪದ ಗೀತೆಯಲ್ಲಿನ

"ಅಂತಂತ್ರಿಸಿ ನೋಡೋರ್ಗೆ ಎಂಥಾ ಕುಣಿಗಲ್ ಕೆರೆ
ಸಂತೇ ಹಾದೀಲಿ ಕಲ್ಲುಕಟ್ಟಿ । ತಾನೊಂದಾನೋ
ಸಂತೇ ಹಾದೀಲಿ ಕಲ್ಲುಕಟ್ಟೆ ॥ ತ್ರಿಪದಿ ಸಾಲುಗಳು ಸಂತೆಯ

ಜನರು ಆ ಹಾದಿಯಲ್ಲಿ ನಡೆಯುವಾಗ ಕಲ್ಲುಕಟ್ಟೆಯಿಂದ ಕಟ್ಟಿದ ಕುಣಿಗಲ್ ಕೆರೆಯನ್ನು ನೋಡಿದವರಿಗೆ ಎಷ್ಟೊಂದು ಭವ್ಯವಾಗಿದೆ ಕೆರೆ ಎಂದೆನಿಸಿ ಆನಂದವನ್ನು ನೀಡುತ್ತದೆ. ಜನಪದರು ಹಳ್ಳಿಯ ಜನರು ಅವಿದ್ಯಾವಂತರಾದರು ಕಾವ್ಯ ಕಟ್ಟುವುದರಲ್ಲಿ ನಿಸ್ಸೀಮರೆಂದು ಕವಿರಾಜಮಾರ್ಗಕಾರನು ಕವಿರಾಜಮಾರ್ಗದಲ್ಲಿ

" ಪದನರಿದು ನುಡಿಯಲುಂ ನುಡಿ
ದುದನರಿದಾರಯಲು ಮಾರ್ಪರಾ ನಾಡವರ್ಗಳ್ ।
ಚದುರರ್ ನಿಜದಿಂ ಕುರಿತೋ ದದೆಯಂ ಕಾವ್ಯಪ್ರಯೋಗ ಪರಿಣತ ಮತಿಗಳ್ ।

ಎಂಬಂತೆ ಹೇಳಿರುವುದು ಅಕ್ಷರಶಃ ಸತ್ಯವಾಗಿದೆ. ಅನಾದಿಕಾಲದಿಂದ ಹರಿದು ಬಂದ ಜನಪದ ಸಾಹಿತ್ಯ ನಿತ್ಯ ನಿರಂತರ ಜನರ ಮನಸ್ಸನ್ನು ಸಂತಸಗೊಳಿಸಿದೆ. ಕುಣಿಗಲ್ ಕೆರೆ ಹಾಡು ವಿಭಿನ್ನ ಜನಪದೀಯ ನೆಲೆಗಳಿಂದ ಕೂಡಿದ್ದಾಗಿದೆ. ಇಂದಿಗೂ ಈ ಕೆರೆಯನ್ನು ನೋಡುವುದೆಂದರೆ ನಮ್ಮ ಸೌಭಾಗ್ಯ. ಜನಪದರು ಈ ಹಾಡಿನಲ್ಲಿ ಕಟ್ಟಿರುವ ಸಾಲುಗಳನ್ನು ನೂ ೆಡಿದಾಗ ಎಲ್ಲಾ ಕಾಲಕ್ಕೂ ಮೂಡಲ್ ಕುಣಿಗಲ್ ಕರೆ ೆ ತನ್ನ ಛಾಪನ್ನು ಕಳೆದುಕೊಳ್ಳಲಾರದು. ಬಸ್ಸಿನಲ್ಲಿ ಪ್ರಯಾಣ ಮಾಡುವಾಗಲೂ ಪ್ರಯಾಣಿಕರ ಕಣ್ಮನಗಳನ್ನು ಸೆಳೆಯುತ್ತದೆ ಈ ಕುಣಿಗಲ್ ಕೆರೆ.

ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ
ಭಾವ ತಂದಾನೆ ಬಣ್ಣದ ಸೀರೆ । ತಾನಂದನೋ
ಭಾವ ತಂದಾನ ೆ ಬಣ್ಣದ ಸೀರ ॥ ೆ ಎಂಬ ಕುಣಿಗಲ್ ಕೆರೆಯ

ಜನಪದ ಗೀತೆಯ ಸಾಲುಗಳಲ್ಲಿ ಕುಣಿಗಲ್ ಕೆರೆ ಬಾಳಿಯ ಹಣ್ಣಿನಂತೆ ಬಾಗಿದೆ ಎಂದು ಹಾಗೂ ಕೆರೆಯಲ್ಲಿ ನೀರು ತುಂಬಿರುವುದರಿಂದ ಕೆರೆಗೆ ಬಾಗಿನ ನೀಡಲು ಭಾವನು ಕೂಡ ಬಣ್ಣದ ಸೀರೆಯನ್ನು ತಂದಿದ್ದಾನೆ ಎಂದು ಹೇಳುವ ಮೂಲಕ ಜನಪ ದರು ಪುರುಷರ ಮನವನ್ನು ಕೂಡ ಆನಂದ ಪರವಶರನ್ನಾಗಿ ಮಾಡಿದೆಯೆಂದು ಇದರಲ್ಲಿ ತಿಳಿಸಿದ್ದಾರೆ. ಜನಪದ ಈ ಹಾಡು ಎಲ್ಲರ ಮನವನ್ನು ಸೂರೆಗೊಳಿಸುವ ತನ್ಮಯತೆಯನ್ನು ಉಂಟುಮಾಡುತ್ತದೆ. ಹಾಗೆಯೇ "ಮೂಡಲ್ ಕುಣಿಗಲ್ ಕೆರೆ" ಜನಪದ ಗೀತೆಯಲ್ಲಿ ಜನಪದಗಾರರು

**International Journal of Academic Research**
**ISSN: 2348-7666; Vol.5, Issue-11, November, 2018**
**Impact Factor: 6.023; Email: drtvramana@yahoo.co.in**

"ನಿಂಬೆಯ ಹಣ್ಣಿನಂತೆ ತುಂಬಿದ ಇದ್ದ ಕುಣಿಗಲ್ ಕೆರೆ
ಅಂದಾ ನೋಡಲು ಶಿವ ಬಂದ್ರು । ತಾನಂದನೋ
ಅಂದಾ ನೋಡಲು ಶಿವ ಬಂದ್ರು ॥ ಎಂಬ ಸಾಲುಗಳು ತ್ರಿಪದಿ ಲಕ್ಷಣಗಳನ್ನು ಅನುಕರಿಸಿ ಬರೆದಂತೆ ಕಂಡು ಬಂದಿದೆ. ಪ್ರತಿ ಸಾಲು ತ್ರಿಪದಿ ಗಣ ವಿಭಜನೆಯಂತೆ ಸಾಗಿದೆ. ಜನಪದರು ಕುರಿತು ಓದದಿದ್ದರೂ ಕಾವ್ಯ ಕಟ್ಟುವುದರಲ್ಲಿ ಪ್ರಾವಣ್ಯತೆಯನ್ನು ಪಡೆದಿದ್ದರು ಎನ್ನುವುದಕ್ಕೆ ಈ ಗೀತೆಯ ಸಾಲುಗಳೇ ಸಾಕ್ಷಿಯಾಗಿವೆ. ನಿಂಬೆಹಣ್ಣು ಹೇಗೆ ರಸಭರಿತವಾಗಿರುತ್ತದೆಯೋ ಹಾಗೆಯೇ ಕುಣಿಗಲ್ ಕರೆ ' ನೀರು ಸ್ವಾಧವಾಗಿರುತ್ತದೆ ಹಾಗೂ ಈ ಕೆರೆಯ ಅಂದವನ್ನು ನೋಡಲು ಸಾಕ್ಷಾತ್ ಶಿವನೇ ಬಂದನೆಂದು ಜನಪದರು ಈ ಸಾಲುಗಳಲ್ಲಿ ತಿಳಿಸಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆ. ಕುಣಿಗಲ್ ಪ್ರದೇಶದ ಜನರು ಕುಣಿಗಲ್ ಕರೆ 'ಯ ನೀರು ಯಥೇಚವಾಗಿರುವುದರಿಂದಲೇ ' ಕೃಷಿಯಲ್ಲಿ ತೊಡಗಿಸಿಕೊಂಡು ಸಂಪತ್ಭರಿತರಾಗಿದ್ದಾರೆ ಎಂದರೆ ಅತಿಶಯೋಕ್ತಿಯೂ ಹೌದು.

ಅಂದಾ ನೋಡಲು ಶಿವ ಬಂದ್ರು ಶಿವಮಗ್ಗಿ
ಕಬ್ಬಕ್ಕಿ ಬಾಯ ಬಿಡುತಾವೆ । ತಾನಂದಾನೋ
ಕಬ್ಬಕ್ಕಿ ಬಾಯ ಬಿಡುತಾವೆ ॥ ಎಂಬ ಕುಣಿಗಲ್ ಹಾಡಿನ ಈ ಸಾಲುಗಳಲ್ಲಿ ಜನಪದರು ಕೆರೆಯನ್ನು ಜನರು ಮಾತ್ರ ನೋಡುವುದಲ್ಲದೆ ಶಿವನೂ ಕೂಡ ನೋಡಲು ಬರುತ್ತಾನೆಂದು ಹಾಗೂ ಕೆರೆಯಲ್ಲಿರುವ ಕಪ್ಪೆ ಮೀನುಗಳು ಸಹ ಶಿವ ಬಂದಿದ್ದಾನೆ ಎಂದು ಅರಿತು ಅವನನ್ನು ನೋಡಲು ಕೆರೆಯಿಂದಲೇ ಎದ್ದು ಬರುತ್ತವೆ ಎಂಬಂತೆ ಕುಣಿಗಲ್ ಕೆರೆಯ ಅಂದವನ್ನು ಜನಪದರು ವೈಭವೀಕರಿಸಿದ್ದಾರೆ.

ಶಿವನ ಮೆಚ್ಚುಗೆಯನ್ನು ಈ ಕೆರೆ ಪಡೆದಿದ್ದು ಇದರ ಅಂದವು ಶಿವನನ್ನೇ ಧರೆಗಿಳಿಸುವಂತೆ ಮಾಡಿದೆ. ಕೆರೆಯ ಎರಡೂ ದಡಗಳಲ್ಲಿ ಬೆಳೆದಿರುವ ಬಾಳೆ ಗಿಡಗಳು ಕೆರೆಯಲ್ಲಿ ಬೀಸುವ ಗಾಳಿಗೆ ಹೆದರಿ ನಡುಗುತ್ತವೆ ಎಂದು ಗೀತೆಯಲ್ಲಿ ವ್ಯಕ್ತಪಡಿಸಿದ್ದಾರೆ. ಜನಪದ ಕವಿಗಳು ಕೆರೆಯಲ್ಲಿ ತೆಪ್ಪದಲ್ಲಿ ಹುಟ್ಟು ಹಾಕುವುದನ್ನು ಕಂಡಂತಹ ಬಾಳೆ ಮೀನುಗಳು ಕೊನೆಗಾಲ ಬಂದಿತೆಂದು ಗೋಳಿಡುತ್ತವೆ ಎಂಬಂತೆ ಮೂಡಲ್ ಕುಣಿಗಲ್ ಕೆರೆ ಗೀತೆಗಳು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಒಟ್ಟಾರೆಯಾಗಿ ಮೂಡಲ್ ಕುಣಿಗಲ್ ಕೆರೆ ಎಂಬ ಜನಪ್ರಿಯ ಜನಪದ ಗೀತೆ ಜನಪದರಿಗಾದ ಆನಂದವನ್ನು, ಕೆರೆಯಿಂದಾಗುವ ಪ್ರಯೋಜನಗಳನ್ನು ವ್ಯಕ್ತಪಡಿಸಿದೆ. ಕರ್ನಾಟಕ ರಾಜ್ಯದಲ್ಲಿ ಕುಣಿಗಲ್ ಕೆರೆ ಜನಪ್ರಿಯತೆಯನ್ನು ಹೊಂದಿದಷ್ಟು ಯಾವ ಕೆರೆಯೂ ಹೊಂದಿಲ್ಲ ಹಾಗೂ ಕರ್ನಾಟಕದ ವಿಶೇಷತೆಯನ್ನು ತಿಳಿಸಿದೆ.

## ಆಕರ ಗ್ರಂಥಗಳು

**01.** **ಜುಂಜಪ್ಪ ಬುಡಕಟ್ಟು ಕಾವ್ಯಮಾಲೆ – ಚೆಲುವರಾಜು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಕಮಲಾಪುರ, ಪ್ರಥಮ ಮುದ್ರಣ–1997**

**02.** **ಮೈಲಾರಲಿಂಗನ ಕಾವ್ಯ ಕರ್ನಾಟಕ ಜನಪದ ಕಾವ್ಯಮಾಲೆ – ಸಂಪಾದಕರು: ಒಗ್ಗರು ಹನುಮಂತಪ್ಪ ಪ್ರಸ್ತಾಪಕ: ಡಾ. ಮಂಜುನಾಥ ಬೇವಿನಕಟ್ಟಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ– ಪ್ರಥಮ ಮುದ್ರಣ 1999**

**03.** ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು– ಕೆ.ವಿ.ಸುಬ್ಬಣ್ಣ – ವಿಶ್ವಕನ್ನಡ ಸಮ್ಮೇಳನ ಸಾಹಿತ್ಯಮಾಲೆ

04. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ– ಎಂ.ಎಂ.ಕಲಬುರ್ಗಿ – ಪ್ರಕಾಶಕರು – ಸ್ವಪ್ನಬುಕ್ ಹೌಸ್, 3ನೇ ಮುಖ್ಯರಸ್ತೆ, ಗಾಂಧೀನಗರ, ಬೆಂಗಳೂರು – 560009